**ಸಾರ್ವಜನಿಕ ಶಿಕ್ಷಣ ಇಲಾಖೆ, ಆಯುಕ್ತರ ಕಛೇರಿ ನೃಪತುಂಗ ರಸ್ತೆ, ಬೆಂಗಳೂರು-01**

ಸಂಖ್ಯೆ:ಯೋ11.ವಿ.ಅ.ಯೋ.ಕೆ.ಜಿ.ಬಿ.ವಿ/2010-11 ದಿನಾಂಕ:.10.05.2010

**ವಿಷಯ:**-2010-11ನೇ ಸಾಲಿನಲ್ಲಿ ಡಾ.ನಂಜುಂಡಪ್ಪ ವರದಿಯನ್ವಯ ವಿಶೇಷ ಅಭಿವೃದ್ಧಿ ಯೋಜನೆಯಡಿ ಅತ್ಯಂತ ಹಿಂದುಳಿದ(MSB) ತಾಲ್ಲೂಕುಗಳಲ್ಲಿ ಆರಂಭಿಸಲಾದ ಕರ್ನಾಟಕ ಕೆ.ಜಿ.ಬಿ.ವಿ ವಸತಿನಿಲಯಗಳಿಗೆ ಆವರ್ತಕ ವೆಚ್ಚವನ್ನು ಬಿಡುಗಡೆ ಮಾಡುವ ಬಗ್ಗೆ.

**ಉಲ್ಲೇಖ:**ಈ ಕಛೇರಿ ಜ್ಞಾಪನ ಸಂಖ್ಯೆ:ಯೋ 7 ವಿ.ಅ.ಯೋ.ಕೆ.ಜಿ.ಬಿ.ವಿ/36/2009-10 ದಿನಾಂಕ:10.05.2010

- - - - -

2010-11ನೇ ಸಾಲಿನಲ್ಲಿ ಡಾ.ನಂಜುಂಡಪ್ಪ ವರದಿಯನ್ವಯ ಶೈಕ್ಷಣಿಕವಾಗಿ ಅತ್ಯಂತ ಹಿಂದುಳಿದ 39 ತಾಲ್ಲೂಕುಗಳಲ್ಲಿ (MSB) ವಿಧ್ಯಾರ್ಥಿನಿಯರಿಗಾಗಿ ಕೆ.ಜಿ.ಬಿ.ವಿ ವಸತಿನಿಲಯಗಳನ್ನು ಆರಂಭಿಸಲು ಉಲ್ಲೇಖಿತ ಜ್ಞಾಪನಾ ಪತ್ರದಲ್ಲಿ ತಿಳಿಸಿರುವಂತೆ ವೆಚ್ಚಗಳನ್ನು ಭರಿಸಲು ಸಂಬಂಧಪಟ್ಟ 16 ಜಿಲ್ಲಾ ಉಪನಿರ್ದೇಶಕರುಗಳಿಗೆ ಹಣ ಬಿಡುಗಡೆ ಮಾಡಿ ಆದೇಶಿಸಲಾಗಿದ್ದು, ಅನುಬಂಧ-2ನ್ನು ಲಗತ್ತಿಸಿರಲಿಲ್ಲ. ಅನುಬಂಧ-2ರಲ್ಲಿ ತಿಳಿಸಿರುವಂತೆ (ಪ್ರತಿ ಲಗತ್ತಿಸಿದೆ) ಕರ್ನಾಟಕ ಕೆ.ಜಿ.ಬಿ.ವಿ ವಸತಿನಿಲಯಗಳಿಗೆ ಖರ್ಚು ಭರಿಸಲು ತಿಳಿಸಲಾಗಿದೆ.

ಸಹನಿರ್ದೇಶಕರು(ಶಾಲಾ ಶಿಕ್ಷಣ)

ಪ್ರತಿಯನ್ನು:

1. ಸಂಬಂಧಿಸಿದ ಜಿಲ್ಲಾ ಉಪನಿರ್ದೇಶಕರುಗಳು (ಆಡಳಿತ) ಸಾರ್ವಜನಿಕ ಶಿಕ್ಷಣ ಇಲಾಖೆ ಇವರ ಮುಂದಿನ ಕ್ರಮಕ್ಕಾಗಿ.
2. ರಾಜ್ಯದ ಸಂಬಂಧಪಟ್ಟ ತಾಲೂಕಾ ಕ್ಷೇತ್ರ ಶಿಕ್ಷಣಾಧಿಕಾರಿಗಳು, ಸಾರ್ವಜನಿಕ ಶಿಕ್ಷಣ ಇಲಾಖೆ ಇವರ ಮುಂದಿನ ಕ್ರಮಕ್ಕಾಗಿ.
3. ಕಛೇರಿ ಪ್ರತಿ.

## ಅನುಬಂಧ-1

2010-11ನೇ ಸಾಲಿನಲ್ಲಿ ಡಾ.ನಂಜುಂಡಪ್ಪ ವರದಿಯನ್ವಯ ವಿಶೇಷ ಅಭಿವೃದ್ಧಿ ಯೋಜನೆಯಡಿ ಅತ್ಯಂತ ಹಿಂದುಳಿದ(MSB) ತಾಲ್ಲೂಕುಗಳಲ್ಲಿ ಆರಂಭಿಸಲಾದ ಪ್ರತಿಯೊಂದು ಕರ್ನಾಟಕ ಕೆ.ಜಿ.ಬಿ.ವಿ ವಸತಿನಿಲಯಗಳಿಗೆ ರೂ.22.43 ಲಕ್ಷಗಳ ಅನುದಾನವನ್ನು ಬಿಡುಗಡೆ ಮಾಡಿದೆ.

**ಲೆಕ್ಕ ಶೀರ್ಷಿಕೆ :2202-02-800-1-15-133**

| ಕ್ರ.ಸಂ | ಸೌಲಭ್ಯಗಳು | ನಿಗದಿಪಡಿಸಿದ ಮೊತ್ತ ರೂ.ಗಳಲ್ಲಿ (ಪ್ರತಿ ವಿದ್ಯಾರ್ಥಿನಿಗೆ.) | ತಿಂಗಳಿಗೆ/ ವಾರ್ಷಿಕ | ತ್ರೈಮಾಸಿಕ ಅನುದಾನ ರೂ.ಗಳಲ್ಲಿ | ಷರಾ |
|---|---|---|---|---|---|
| 1 | ಆಹಾರದ ವೆಚ್ಚ | 600=00 | ತಿಂಗಳಿಗೆ | 1,80,000=00 | ಪ್ರತಿ ಮಗು ಓದುವ ಶಾಲೆಯಲ್ಲಿ ಮದ್ಯಾಹ್ನ ಉಪಹಾರ ಯೋಜನೆಯಡಿ ಊಟ ಪಡೆಯುವುದರಿಂದ ಬೆಳಿಗ್ಗೆ ಒಂದು ಉಪಹಾರ ಮತ್ತು ರಾತ್ರಿ ಒಂದು ಊಟ.ಉಳಿದ ರಜಾ ದಿನಗಳಲ್ಲಿ ಒಂದು ಉಪಹಾರ ಮತ್ತು ಎರಡು ಊಟ. |
| 2 | ಸಮವಸ್ತ್ರ, ಬೆಲ್ಟ್ ಟ್ರ್ಯಾಕ್‌ಸೂಟ್,ಷೂ,ಸಾಕ್ಸ,ಶಾಲಾಬ್ಯಾಗ್ ಸಾಮಾನ್ಯ ಉಡುಗೆ | 1300=00 | ವಾರ್ಷಿಕ | 1,30,000=00 | ಪ್ರತಿ ಮಗುವಿಗೆ ಉಚಿತ ಸಮವಸ್ತ್ರ ಯೋಜನೆಯಡಿ ಒಂದು ಜೊತೆ ಶಾಲೆಯಲ್ಲಿ ಪಡೆಯುವುದರಿಂದ ಇನ್ನೊಂದು ಜೊತೆ ಸಮವಸ್ತ್ರ ವಸತಿನಿಲಯದಿಂದ ಹಾಗೂ ಒಂದು ಜೊತೆ ಸಾಮಾನ್ಯ ಉಡುಗೆ. |
| 3 | ಲೇಖನ ಸಾಮಗ್ರಿ (ನೋಟ್‌ಬುಕ್, ಪೆನ್ನು,ಕಂಪಾಸ್ ಪೆಟ್ಟಿಗೆ,ಪೆನ್ಸಿಲ್ ಇತರೆ) | 500=00 | ವಾರ್ಷಿಕ | 50,000=00 | ಪ್ರತಿ ಮಗು ಉಚಿತ ಪಠ್ಯಪುಸ್ತಕ ವಿತರಣೆ ಯೋಜನೆಯಡಿ ಪಠ್ಯಪುಸ್ತಕ ಪಡೆಯುವುದರಿಂದ ಅದನ್ನು ಹೊರತುಪಡಿಸಿ ಉಳಿದವುಗಳನ್ನು ಒದಗಿಸುವುದು. |
| 4 | ದಿನಪತ್ರಿಕೆ | 1000=00 | ವಾರ್ಷಿಕ | 1000=00 | ಪ್ರತಿ ನಿಲಯಕ್ಕೆ (ಹತ್ತು ತಿಂಗಳಿಗೆ) |
| 5 | ವೈದ್ಯಕೀಯ ವೆಚ್ಚ/ ಸಾದಿಲ್ವಾರು ವೆಚ್ಚ | 10,000=00 | ವಾರ್ಷಿಕ | 10,000=00 | ಪ್ರತಿ ನಿಲಯಕ್ಕೆ |
| 6 | ಜಮಖಾನೆ,ಚಾದರ ಬೆಡ್‌ಸೀಟ್, ತಲೆ ದಿಂಬು, | 1000=00 | ಮೊದಲನೇ ವರ್ಷಕ್ಕೆ | 1,00,000=00 | ಖಾದಿ ಗ್ರಾಮೋದ್ಯೋಗ ಮಳಿಗೆಯಲ್ಲಿ ಖರೀದಿ ಮಾಡುವುದು. |
| 7 | ಅಡುಗೆ ಮನೆಗೆ ಬೇಕಾಗುವ ಸಲಕರಣೆಗಳು, ಪಾತ್ರೆಗಳು, ತಟ್ಟೆ, ಲೋಟ ಮತ್ತು ಇತ್ಯಾದಿ. | 50,000=00 | ಮೊದಲನೇ ವರ್ಷಕ್ಕೆ | 50,000=00 | ಪ್ರತಿ ನಿಲಯಕ್ಕೆ |
| 8 | ಅಡುಗೆ ಅನಿಲ ಸಂಪರ್ಕ,ಸ್ಟೋವ್, 6 ಸಿಲಿಂಡರ್ | --- | --- | --- | ಪ್ರತಿ ನಿಲಯಕ್ಕೆ(ಗರಿಷ್ಟ 10,000 ರೂಗಳನ್ನು ಮೀರತಕ್ಕದ್ದಲ್ಲ.) |

| | | | | | |
|---|---|---|---|---|---|
| | ಮುಂಗಡ ಠೇವಣಿ | | | | |
| 9 | ವಸತಿ ನಿಲಯ ಬಾಡಿಗೆ | ----- | --- | --- | ನಿಯಮಾನುಸಾರ ವಾಸ್ತವಿಕ ವೆಚ್ಚ (ಮಾಸಿಕ ರೂ. 10,000 ಗಳನ್ನು ಮೀರತಕ್ಕದ್ದಲ್ಲ.) |
| 10 | ವಿದ್ಯುತ್/ನೀರಿನ ವೆಚ್ಚ | ----- | --- | --- | ವಾಸ್ತವಿಕ ವೆಚ್ಚ |
| 11 | ಇತರೆ | 3000=00 | ವಾರ್ಷಿಕ | 3,000=00 | ಪ್ರತಿ ನಿಲಯಕ್ಕೆ |

## ಕರ್ನಾಟಕ ಕೆ.ಜಿ.ಬಿ.ವಿ.ವಸತಿನಿಲಯದ ಸಿಬ್ಬಂದಿ ವಿವರ

| | | | | | |
|---|---|---|---|---|---|
| 1 | ವಾರ್ಡನ್–ಮಹಿಳಾ1 (ಬಿ.ಎ,ಬಿ.ಎಡ್/ ಬಿ.ಎಸ್ಸಿ,ಬಿಎಡ್) | 5,100=00 | ತಿಂಗಳಿಗೆ | 15,300=00 | ತಾತ್ಕಾಲಿಕ ನೇಮಕ (ಹತ್ತು ತಿಂಗಳಿಗೆ) (Out source ಮಾಡಿದಲ್ಲಿ) |
| 2 | ಅರೆಕಾಲಿಕ ದೈಹಿಕ ಶಿಕ್ಷಕರು.ಮಹಿಳಾ 1 (ಸಿ.ಪಿ.ಎಡ್) | 3600=00 | ತಿಂಗಳಿಗೆ | 10,800=00 | (ಹತ್ತು ತಿಂಗಳಿಗೆ) (Out source ಮಾಡಿದಲ್ಲಿ) |
| 3 | ಅಡುಗೆಯವರು 3 | 3100=00 *3 9300=00 | ತಿಂಗಳಿಗೆ | 27,900=00 | ತಲಾ 3100 ರೂ.ಗಳು (ಹತ್ತು ತಿಂಗಳಿಗೆ) (Out source ಮಾಡಿದಲ್ಲಿ) |
| 4 | ಮಹಿಳಾ ಸಹಾಯಕರು. 2 | 2300=00 *2 4600=00 | ತಿಂಗಳಿಗೆ | 13,800=00 | ತಲಾ 2300 ರೂ.ಗಳು (ಹತ್ತು ತಿಂಗಳಿಗೆ) (Out source ಮಾಡಿದಲ್ಲಿ) |
| 5 | ರಾತ್ರಿಕಾವಲುಗಾರ 1 (ಪುರುಷ) | 1800=00 | ತಿಂಗಳಿಗೆ | 5,400=00 | (ಹತ್ತು ತಿಂಗಳಿಗೆ) (Out source ಮಾಡಿದಲ್ಲಿ) |

ಸೂಚನೆಗಳು: * ಹಾಲಿ ಎಸ್.ಎಸ್.ಎ ಕೆ.ಜಿ.ಬಿ.ವಿ. ವಸತಿನಿಲಯಗಳಲ್ಲಿ 2010-11ನೇ ಸಾಲಿಗೆ ಅನುಸರಿಸುತ್ತಿರುವ ಊಟದ ಮೆನುವನ್ನು ಪಾಲಿಸುವುದು.ಇದರಂತೆ ಬಾಹ್ಯ ನೇಮಕಾತಿ (Out source) ಮಾಡಿದಲ್ಲಿ ಎಸ್.ಎಸ್.ಎ ಕೆ.ಜಿ.ಬಿ.ವಿ. ನಿಯಮಗಳನ್ನು ಪಾಲಿಸುವುದು.

* ಸರ್ಕಾರಿ ನಿಯಮಗಳನುಸಾರ ಕೊಟೇಶನ್ ಅಥವಾ ಟೆಂಡರ್ ಪ್ರಕ್ರಿಯೆ ನಿಯಮಗಳನ್ನು ಪಾಲಿಸುವುದು.
* ಮೇಲೆ ತಿಳಿಸಿರುವ ಸಿಬ್ಬಂದಿ 100 ಹೆಣ್ಣು ಮಕ್ಕಳ ದಾಖಲಾತಿಗೆ ನಿಗದಿಪಡಿಸಲಾಗಿದೆ.ಕಡಿಮೆ ಸಂಖ್ಯೆ ಇದ್ದರೆ ಅಡುಗೆಯವರು ಮತ್ತು ಸಹಾಯಕರು ತಲಾ ಒಬ್ಬರಂತೆ ನೇಮಕ ಮಾಡಿಕೊಳ್ಳುವುದು.

ನಿರ್ದೇಶಕರು(ಪ್ರೌಢಶಿಕ್ಷಣ)